ಸಿಕ್ಕಿಲ್ಲ. ಮಾನ್ಯ ಬಚ್ಚೇಗೌಡರು ಅಂದು ತಮ್ಮ ಭಾಷಣದಲ್ಲಿ ಕೇಂದ್ರ ಸರ್ಕಾರ ಏನು ಹಣವನ್ನು ಕೊಟ್ಟಿದೆ ಅದರಲ್ಲಿ ನಿಮ್ಮ ಕಾರ್ಯವನ್ನು ಪ್ರಾರಂಭ ಮಾಡಿ, ರಾಜ್ಯ ಸರ್ಕಾರ ಕೊಡಬೇಕಾದ ಹಣವನ್ನು ಕೊಡುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎಂದಿದ್ದರು. ಆಡಳಿತಾತ್ಮಕ ಮಂಜೂರಾತಿಯನ್ನು ಕೊಡುವ ಬಗ್ಗೆ ಒಂದು ಪತ್ರ ಕೂಡ ಕಾರ್ಯದರ್ಶಿಗಳಿಗೆ ಬಂದು ಕೂಡಲಾಗಿದೆ. ಈಗಾಗಲೇ ಇದೆಲ್ಲಾ ನಡೆದು 11 ತಿಂಗಳಾಗಿದೆ. ಆದರೂ ಇವೊತ್ತಿನವರೆಗೂ ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟಿಲ್ಲ. ಈಗಾಗಲೇ ಕೊಟ್ಟಿದ್ದರೆ ಅಲ್ಲಿನ ಜನರಿಗೆ ನೀರಿನ ವ್ಯವಸ್ಥೆ ಆಗುತ್ತಿತ್ತು. ಆದುದರಿಂದ, ಇದರ ಕಡೆ ಗಮನ ಹರಿಸಿ ಆಡಳಿತಾತ್ಮಕ ಮಂಜೂರಾತಿಯನ್ನು ಕೊಡಬೇಕು. ಏಕೆಂದರೆ ನಮ್ಮ ಮಲೆನಾಡಿನ ಕಡೆ ಕೇವಲ 4 ತಿಂಗಳುಗಳಲ್ಲಿ ಮಾತ್ರ ಕಾಮಗಾರಿ ಕೆಲಸವನ್ನು ಮಾಡಬಹುದು. ಮುಂದೆ ಮಳೆ ಬರುವುದರಿಂದ ಕೆಲಸ ಮಾಡುವುದಕ್ಕಾಗುವುದಿಲ್ಲವಾದ ಕಾರಣ ತಕ್ಷಣ ಇದರ ಬಗ್ಗೆ ಕ್ರಮ ತೆಗೆದುಕೊಂಡು ಸರ್ಕಾರ ಆದೇಶ ಹೊರಡಿಸಬೇಕೆಂದು ಕೋರುತ್ತೇನೆ.

ಶ್ರೀ ಬಿ.ಎಸ್.ಬಚ್ಚೇಗೌಡ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ಯೋಜನೆ ಒಂದು ಕೋಟಿ ರೂಪಾಯಿಗಳದ್ದಾಗಿದ್ದು ಇದರಲ್ಲಿ 50 ಲಕ್ಷ ರೂಪಾಯಿಗಳು ಕೇಂದ್ರ ಸರ್ಕಾರದಿಂದ ಬಂದಿದೆ. 1999-2000ನೇ ಇಸವಿಯಲ್ಲಿ ರಾಜ್ಯ ಸರ್ಕಾರ ಇನ್ನುಳಿದ 50 ಲಕ್ಷ ರೂಪಾಯಿಗಳನ್ನು ಕೊಟ್ಟು ಕಾರ್ಯಕ್ರಮವನ್ನು ಪ್ರಾರಂಭ ಮಾಡಿ ಅದಕ್ಕೆ ಬೇಕಾದ ಆಡಳಿತಾತ್ಮಕ ಮಂಜೂರಾತಿಯನ್ನು ಕೊಡಿಸುವುದಕ್ಕೆ ವ್ಯವಸ್ಥೆಯನ್ನು ಮಾಡುತ್ತೇನೆ.

(ಛ) ಎಸ್‌ಸಿ:ಎಸ್‌ಟಿ ಕಾರ್ಪೊರೇಷನ್ ವತಿಯಿಂದ ತೆಗೆದ ಬೋರ್‌ವೆಲ್‌ಗಳಿಗೆ ಪಂಪ್‌ಸೆಟ್‌ಗಳನ್ನು ಪೂರೈಕೆ ಮಾಡುವುದು.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ) : ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲೆಲ್ಲಾ ಎಸ್‌ಸಿ:ಎಸ್‌ಟಿ ಕಾರ್ಪೊರೇಷನ್ ವತಿಯಿಂದ ಕೊರೆದ ಬೋರ್‌ವೆಲ್‌ಗಳಿಗೆ ಎನರ್ಜೈಸ್ (ವಿದ್ಯುದ್ದೀಕರಣ) ಆಗದೇ ಇರುವುದರಿಂದ ಇನ್ನು ಮುಂದೆ ಬೋರ್‌ವೆಲ್‌ಗಳನ್ನು ಕೊರೆಯಬಾರದು ಎಂದು ಆದೇಶ ಮಾಡಿದ್ದಾರೆ. ವಿದ್ಯುದ್ದೀಕರಣವನ್ನು ಮಾಡಲು ಕೆ.ಇ.ಬಿ.ಯವರು ತಯಾರಾಗಿದ್ದರೂ ಕೂಡ ಪಂಪ್‌ಸೆಟ್‌ಗಳು ಪೂರೈಕೆಯಾಗುತ್ತಿಲ್ಲವೆನ್ನುವ ದೂರಿದೆ. ಈ ಪಂಪ್‌ಸೆಟ್ ಬಗ್ಗೆ ಹಿಂದೆ ಒಂದು ದೊಡ್ಡ ಹಗರಣವೇ ನಡೆದಿದೆ. 4,000 ಪಂಪ್‌ಸೆಟ್‌ಗಳನ್ನು ಸರ್ಕಾರದ ಆದೇಶದ ಪ್ರಕಾರ ಎಸ್.ಎಸ್.ಐ. ಯೂನಿಟ್‌ಗಳಿಂದೇ ಪರ್ಚೇಸ್ ಮಾಡಬೇಕು ಎಂದು ಹೇಳಿದ್ದರೂ ಕೂಡ ಕೆ.ಎಸ್.ಐ.ಎಮ್.ಸಿ.ಯಿಂದ ಯಾರಿಗೋ ಸಾಲ್ವು ಜನರಿಗೆ ಅವಾರ್ಡ್ ಹಾಕಿ ಆ 4000 ಪಂಪ್‌ಸೆಟ್‌ಗಳನ್ನು ಸಪ್ಲೈ ಮಾಡುವುದಕ್ಕಾಗದೇ ದೊಡ್ಡ ಗೊಂದಲ ಉಂಟಾಗಿ ಈ ಬಗ್ಗೆ ಬಹುಶಃ ವಿಧಾನ ಪರಿಷತ್ತಿನಲ್ಲಿ ದೊಡ್ಡ ಗಲಾಟೆಯೇ ಆದಮೇಲೆ ಇದರ ಬಗ್ಗೆ ತನಿಖೆ ಮಾಡಲು ಸಮಿತಿ ರಚನೆಯಾಗಿ ಅದಕ್ಕೆ ಕೆ.ಹೆಚ್.ಶ್ರೀನಿವಾಸ್‌ರವರು ಅಧ್ಯಕ್ಷರಾಗಿ ತನಿಖೆ ಮಾಡಿರುವ ಬಗ್ಗೆ ಸಮಿತಿ ತನ್ನ ವರದಿಯನ್ನೂ ಕೂಡ ಸರ್ಕಾರಕ್ಕೆ ಈಗಾಗಲೇ ಕೊಟ್ಟಿದೆ. ಈ ವರದಿಯ 15, 16 ಮತ್ತು 17ನೇ ಅನುಬಂಧದಲ್ಲಿ ಏನು ಹೇಳಲಾಗಿದೆಯೋ ಅದರಂತೆ ಸರ್ಕಾರ ಕಾರ್ಯಕ್ರಮ ಕೈಗೊಳ್ಳುತ್ತದೆಯೇ

ಎಂಬ ಬಗ್ಗೆ ಹೇಳಬೇಕು. ಏಕೆಂದರೆ ಇವರು ಸರ್ಕಾರದ ಆದೇಶ ಇಲ್ಲವೇ ಇಲ್ಲ ಎಂಬಂತೆ ಹೊರಗಡೆಯವರಿಂದ ಪಂಪ್‌ಸೆಟ್‌ಗಳನ್ನು ಪರ್ಚೇಸ್ ಮಾಡಿದ್ದಾರೆ. 1998ರ ಫೆಬ್ರವರಿಯಲ್ಲಿಯೇ ಎಸ್.ಎಸ್.ಐ. ಯೂನಿಟ್‌ಗಳಿಂದ ಪರ್ಚೇಸ್ ಮಾಡಬೇಕು ಎಂದಿದ್ದರೂ ಕೂಡ ಆ ಆದೇಶವಾದ ಮೇಲೂ ಕೂಡ ಹೊರಗಡೆಯವರಿಂದ ಪಂಪ್‌ಸೆಟ್‌ಗಳನ್ನು ಖರೀದಿ ಮಾಡಿದ್ದಾರೆ. ಇದೊಂದು ವಿಷಯ. ಎರಡನೆಯದಾಗಿ ಅಲ್ಲಿ ಕೆಲವರು ಬಹಳ ವರ್ಷಗಳಿಂದ ಸೇರಿಕೊಂಡವರು ಸರ್ಕಾರಕ್ಕೂ ಮತ್ತು ನಮಗೂ ಸಂಬಂಧವೇ ಇಲ್ಲವೆನ್ನುವಂತೆ ಮಾತನಾಡುತ್ತಾರೆ. ಮೂರನೆಯದಾಗಿ ಕೆ.ಎಸ್.ಐ.ಎಮ್.ಸಿ.ಯಲ್ಲಿ ಯಾರು ನೋಂದಾವಣಿ ಮಾಡಿಕೊಂಡಿದ್ದಾರೆ ಅವರೆಲ್ಲಾ ಅಪ್-ಟು ಡೇಟ್ ಆಗಿ ಅಥವಾ ಕ್ಯಾಲಿಫೈಡ್ ಕಂಪನಿಯವರೇ ಆಗಿದ್ದಾರೆ ಎಂಬುದಕ್ಕೆ ಯಾವುದೇ ಆಧಾರವಿಲ್ಲದ್ದಾಗಿದೆ. ಇವೊತ್ತು ಇವರೆಲ್ಲಾ ಏನು ಮಾಡುತ್ತಾರೆಂದರೆ ಕೇವಲ 7 ಸಾವಿರ 8 ಸಾವಿರಕ್ಕೆ ಪಂಪ್‌ಸೆಟ್‌ಗಳನ್ನು ತಂದು ಅದರ ಮೇಲೆ ಒಳ್ಳೆಯ ಕಂಪನಿಗಳಾದ ಅಟ್ಲಾಂಟ್ ಎಂತಲೋ ಅಥವಾ ಉನಿಲ್ ಎಂತಲೋ ಅಥವಾ ಇನ್ನಿತರ ಕಂಪನಿಯ ಲೇಬಲ್‌ನ್ನು ಹಾಕಿ ಕೊಟ್ಟುಬಿಡುತ್ತಾರೆ. ಇದರಿಂದ 19 ಅಥವಾ 20 ಸಾವಿರ ಬಿಲ್ ಮಾಡಲು ಇವರಿಗೆ ಅನುಕೂಲವಾಗಿದೆ. ಈ ರೀತಿ ಮಾಡಿ ಎಸ್‌ಸಿ: ಎಸ್‌ಟಿ ಕಾರ್ಪೊರೇಷನ್‌ನವರಿಗೆ ಅತ್ಯಂತ ಕಳಪೆ ಮಟ್ಟದ ಪಂಪ್‌ಸೆಟ್‌ನ್ನು ಕೊಟ್ಟಿದ್ದಾರೆ. ಇದೊಂದು. ಇವರು ಸಪ್ಲೈ ಮಾಡಿದ ಪಂಪ್‌ಸೆಟ್‌ಗಳಿಗೆ ಭಾರಿ ಛಾರ್ಜ್ ಮಾಡುತ್ತಿದ್ದಾರೆ. ಇದು ಎರಡನೆಯದು. ಮೂರನೆಯದಾಗಿ ಯಾವ ಗುಂಪು ಈ ಎಸ್‌ಸಿ:ಎಸ್‌ಟಿ ಕಾರ್ಪೊರೇಷನ್‌ನಲ್ಲಿ ಸೇರಿಕೊಂಡು ಅನ್ಯಾಯ ಮಾಡುತ್ತಿದ್ದಾರೆ ಅವರ ವಿರುದ್ಧ ಕ್ರಮ ಜರುಗಿಸಬೇಕು. ಈಗಾಗಲೇ ನಮ್ಮ ತಾಲ್ಲೂಕಿನಲ್ಲಿ ಏನು ಬೋರ್‌ವೆಲ್‌ಗಳನ್ನು ಕೊರೆಯಲಾಗಿದೆ ಅದಕ್ಕೆ ಎನರ್ಜೈಸ್ ಮಾಡಿಸಿ ಇನ್ನೂ ಎಷ್ಟು ಬೋರ್‌ವೆಲ್‌ಗಳನ್ನು ಕೊರೆಯಬೇಕಾಗಿದೆಯೋ ಅದನ್ನು ಸರ್ಕಾರ ಕೊರೆಸಿಕೊಡುತ್ತದೆಯೇ ಎಂಬ ಬಗ್ಗೆ ಸರ್ಕಾರ ಹೇಳಬೇಕು.

ಶ್ರೀ ಬಿ.ಎನ್.ಬಚ್ಚೇಗೌಡ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಮೇಲ್ಮನೆಯಲ್ಲಿ ಸಮಾಜ ಕಲ್ಯಾಣ ಸಚಿವರು ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಅಲ್ಲಿ ರಚನೆಯಾಗಿದ್ದ ಸಮಿತಿಯು ಕೊಟ್ಟಿರುವ ವರದಿಯಲ್ಲಿ ಪಂಪ್‌ಸೆಟ್‌ಗಳ ಮೇಲೆ ಬೇರೆ ಬೇರೆ ಕಂಪನಿಯ ಬ್ರಾಂಡ್‌ಗಳನ್ನು ಹಾಕಿ ಕೊಡುತ್ತಿರುವುದಕ್ಕೆ ತಡೆಯಾಜ್ಞೆ ಕೊಡಬೇಕೆಂದು ಹೇಳಲಾಗಿತ್ತು. ಆ ಪ್ರಕಾರ ಮಂತ್ರಿಗಳು ತಡೆಯಾಜ್ಞೆಯನ್ನು ಕೊಟ್ಟು ಪಂಪ್‌ಸೆಟ್‌ಗಳ ಖರೀದಿಯನ್ನು ನಿಲ್ಲಿಸಿದ್ದಾರೆ. ಈಗ ಕೊರೆದಿರುವ ಬೋರ್‌ವೆಲ್‌ಗಳನ್ನು ಎನರ್ಜೈಸ್ ಮಾಡಲು ಆದ್ಯತೆಯ ಮೇರೆಗೆ ಮೊದಲು ಗಂಗಾ ಕಲ್ಯಾಣ ಯೋಜನೆಯಲ್ಲಿ ಕೊರೆದಿರುವುದಕ್ಕೆಲ್ಲಾ ಎನರ್ಜೈಸ್ ಆಗಿದೆ. ಇದರಲ್ಲಿ ಇನ್ನೂ ಕೆಲವು ತಾಲ್ಲೂಕುಗಳಲ್ಲಿ ಎನರ್ಜೈಸ್ ಆಗದಿದ್ದರೆ ಮೊದಲು ಅಂಥ ಕಡೆಗೆ ಆದ್ಯತೆ ಕೊಟ್ಟು ಎನರ್ಜೈಸ್ ಮಾಡಿಸಲು ವ್ಯವಸ್ಥೆಯನ್ನು ಮಾಡಲಾಗುವುದು.

ಶ್ರೀ ಹೆಚ್.ಡಿ.ಬಸವರಾಜ್ : ಮಾನ್ಯ ಅಧ್ಯಕ್ಷರೆ, ಪಂಪ್‌ಸೆಟ್ ಖರೀದಿಯಲ್ಲಿ ನಾಲ್ಕು ಕಂಪನಿಗಳ ಬಗ್ಗೆ ಏನು ಹೇಳಿದ್ದಾರೆ ಅವರು ನಿಜವಾಗಿಯೂ ಕೂಡ ಪಂಪ್‌ಸೆಟ್‌ನ್ನು ತಯಾರು ಮಾಡಲು, ಪ್ಯಾನಲ್ ಬೋರ್ಡ್‌ನ್ನು ಕೂಡ ಅವರೇ ತಯಾರು ಮಾಡಲು ಬೇಕಾದ ವ್ಯವಸ್ಥೆ ಇರುವ ವಿಶೇಷ ಘಟಕಗಳನ್ನು ಅವರು ಹೊಂದಿಲ್ಲ. ಅವರು ಎಲ್ಲೋ ಪರ್ಚೇಸ್ ಮಾಡಿ ಬೇರೆ ಲೇಬಲ್ ಹಾಕುತ್ತಿದ್ದಾರೆ.

ಈ ಬಗ್ಗೆ ಸರ್ಕಾರ ನಿಗಾವಹಿಸಬೇಕಾಗಿದೆ. ಏಕೆಂದರೆ ಇದರಲ್ಲಿ ದೊಡ್ಡ ಅವ್ಯವಹಾರವೇ ನಡೆಯುತ್ತಿದೆ.

ಶ್ರೀ ಬಿ.ಎನ್.ಬಚ್ಚೇಗೌಡ : ಖರೀದಿಗೆ ಸ್ಪೇ ಕೊಡಲಾಗಿದೆ.

(ಜ) ಯೂನಿವರ್ಸಿಟಿಮೈಸ್ ರಿಸರ್ವೇಶನ್ ಕೊಡುವ ಬಗ್ಗೆ ಹಾಗೂ ಕುಡಿಯುವ ನೀರಿನ ಸಮಸ್ಯೆ.

ಶ್ರೀ ವೈಜನಾಥ್ ಪಾಟೀಲ್ (ಚಿಂಚೋಳಿ ವಿಧಾನಸಭಾ ಕ್ಷೇತ್ರ) : ಮಾನ್ಯ ಅಧ್ಯಕ್ಷರೆ, ನಾನು ಈಗ ಹೇಳುವ ವಿಷಯ ವಿಧಾನ ಸಭೆಯಲ್ಲಿ ಈಗಾಗಲೇ ಅನೇಕ ಬಾರಿ ಚರ್ಚೆಯಾಗಿದೆ. ಯೂನಿವರ್ಸಿಟಿಮೈಸ್ ರಿಸರ್ವೇಶನ್ ಕೊಡಬೇಕು ಎಂದಾಗ ಸರ್ಕಾರ ಕೂಡ ಅದಕ್ಕೆ ಒಪ್ಪಿಕೊಂಡಿತು. ಈಗಾಗಲೇ ಅದು ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರ ಹಾಗೂ ಬೇರೆ ಕಡೆಗಳಲ್ಲಿ ಇದೆ. ಒಪ್ಪಿಕೊಂಡ ನಂತರ ಈ ರೀತಿ ಮಾಡಲು ಆರ್ಟಿಕಲ್ 371ಕ್ಕೆ ಅಮೆಂಡ್‌ಮೆಂಟ್ ಮಾಡಬೇಕು ಎಂದರು. ಇದನ್ನು ಕೇಂದ್ರ ಸರ್ಕಾರ ಮಾಡಬೇಕು. ಈ ರೀತಿ ಅಮೆಂಡ್‌ಮೆಂಟ್ ಮಾಡಬೇಕೆಂದು ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಹೋಗಬೇಕು. ಇದರ ಬಗ್ಗೆ ವಿಧಾನ ಸಭೆಯಲ್ಲಿ ಹೇಳಿಕೆ ಕೊಡದಿದ್ದರೂ ಕೂಡ ಸರ್ಕಾರ ಪತ್ರಿಕೆಯಲ್ಲಿ ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಪತ್ರವನ್ನು ಬರೆದಿದ್ದೇವೆ ಎನ್ನುವ ಹೇಳಿಕೆಯನ್ನು ಕೊಟ್ಟರು. ಆದರೆ ನಾನು ವಿಚಾರಿಸಿದ್ದೇನೆ, ಇಲ್ಲಿಯವರೆಗೂ ಕೂಡ ಆ ರೀತಿಯ ಪತ್ರ ಬರೆದಿಲ್ಲ. ಆದರೂ ಕೂಡ ಈಗೇನು ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೇವೆ ಎಂದಿದ್ದಾರೆ ಆ ಪತ್ರದ ಪ್ರತಿಯನ್ನು ನಮಗೆ ಕೊಟ್ಟರೆ ನಾವೇ ಕೇಂದ್ರ ಸರ್ಕಾರಕ್ಕೆ ಡೆಲಿಗೇಶನ್ ಹೋಗುತ್ತೇವೆ.

8.20 ಪಿ.ಎಂ

ಪ್ರತೀ ಸಲ ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ಮಾಡುವುದಾಗಲಿ, ರೈಲ್ವೆ ವಲಯದ ಬಗ್ಗೆ ಆಗಲೀ, ನಾವು ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಡೆಲಿಗೇಷನ್ ಹೋಗುತ್ತೇವೆಂದು ಹೇಳುತ್ತಾರೆ. ಆದರೆ ಈ ವಿಷಯದಲ್ಲಿ ಏಕೋ ಡೆಲಿಗೇಷನ್ ಹೋಗುತ್ತಿಲ್ಲ, ಪತ್ರವನ್ನೂ ಸಹ ಬರೆದಿಲ್ಲ. ಆ ದೃಷ್ಟಿಯಿಂದ ಸರ್ಕಾರದವರು ಪತ್ರ ಬರೆದು ಅದರ ಪ್ರತಿಯನ್ನು ಕೊಟ್ಟರೆ ನಾವೇ ಕೇಂದ್ರ ಸರ್ಕಾರಕ್ಕೆ ಹೋಗಿ ಪಾರ್ಲಿಮೆಂಟ್‌ನಲ್ಲಿ ಆ ಬಿಲ್ ಇಟ್ಟು ಅಮೆಂಡ್‌ಮೆಂಟ್ ಮಾಡುವುದಕ್ಕೆ ಒತ್ತಾಯ ತರುತ್ತೇವೆ. ಆದ್ದರಿಂದ, ರಾಜ್ಯ ಸರ್ಕಾರದಿಂದ ಆ ಪತ್ರವನ್ನು ಕೊಡಬೇಕು. ಇನ್ನು ಕುಡಿಯುವ ನೀರಿನ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಇದ್ದು, ಅಲ್ಲಿ ಜಿಲ್ಲಾ ಪರಿಷತ್ತಿನವರು ಕಳಪೆ ದರ್ಜೆಯ ಪೈಪುಗಳು ಮತ್ತು ಇನ್ನಿತರ ಮೆಟೀರಿಯಲ್ಸ್‌ನ್ನು ಕೊಂಡುಕೊಳ್ಳುತ್ತಾರೆ ಮತ್ತು ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ತಾಲ್ಲೂಕು ಅಧಿಕಾರಿಗಳು ಇರುತ್ತಾರೆ. ಪ್ರತಿಯೊಂದು ಕಡೆಯೂ ಕುಡಿಯುವ ನೀರಿನ ಸಲುವಾಗಿ ಎಷ್ಟೇ ಯೋಜನೆಗಳನ್ನು ಪೂರ್ಣ ಮಾಡಿದರೂ ಅದು ಕಳಪೆ ದರ್ಜೆಯ ಪೈಪು ಮತ್ತು ಬೇರೆ ಮೆಟೀರಿಯಲ್ಸ್‌ನ್ನು ಅಳವಡಿಸುವುದರಿಂದಾಗಿ ಕೊಳವೆ ಬಾವಿಗಳು ಮರುದಿವಸವೇ ಫೈಲ್ ಆಗುತ್ತವೆ. ಇದು ನಮ್ಮ ಗುಲ್ಬರ್ಗಾ ಜಿಲ್ಲೆಯಲ್ಲಿನ ಜಿಲ್ಲಾ ಪರಿಷತ್ತಿನ ಪರಿಸ್ಥಿತಿ ಆಗಿದೆ. ಗುಲ್ಬರ್ಗಾ ಜಿಲ್ಲಾ ಪರಿಷತ್ತಿನಲ್ಲಿ ಯಾವುದೇ ಫೈಲುಗಳನ್ನು ಪರಿಷತ್ತಿನ ಅಧ್ಯಕ್ಷರಿಗೆ ಕಳುಹಿಸದೇ ಅಲ್ಲಿಯ ಮುಖ್ಯ ಕಾರ್ಯದರ್ಶಿಯೇ ಫೈನಲೈಜ್ ಮಾಡಿ ಕಳುಹಿಸುತ್ತಾನೆ. ಒಂದು ಫೈಲ್ ಕೂಡ ಅಲ್ಲಿಯ ಅಧ್ಯಕ್ಷರಿಗೆ ಕಳುಹಿಸುವುದಿಲ್ಲ ಮತ್ತು